ಕೊಡಲಿಕ್ಕೆ ತಮಗೆ ಹಕ್ಕಿದೆ. ಆದರೆ ಇವತ್ತು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದಂಥ ವಿಷಯದ ಬಗ್ಗೆ ಒಂದು ಸಂಪೂರ್ಣವಾದಂಥ ನೋಟ್‌ನ್ನು ಕಳುಹಿಸುವಂಥಾದ್ದು ಪತ್ರಕರ್ತರೊಂದಿಗೆ ತೀರ್ಮಾನ ತೆಗೆದುಕೊಳ್ಳುವಂಥಾದ್ದು, ಆ ರೀತಿಯೇ ಮುದ್ರಣ ಮಾಡಬೇಕೆಂದು ಹೇಳುವಂಥಾದ್ದು....

ಅಧ್ಯಕ್ಷರು :- ನಾವೇ ಒಂದು ಕೊಡುತ್ತೇವೆಲ್ಲಾ.....

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಚರ್ಚೆಯಾಗಿದೆ. ಯಾವುದಾದರೂ ಅನ್‌ಪಾರ್ಲಿಮೆಂಟರಿ ಶಬ್ದ ಇದ್ದರೆ ತಾವು ತೆಗೆಯಿರಿ.

ಅಧ್ಯಕ್ಷರು :- ಆದರೆ ಅದನ್ನು ನಾನು ನೋಡಬೇಕಲ್ಲಾ?

ಶ್ರೀ ಜಗದೀಶ್ ಶೆಟ್ಟರ್ :- ಚರ್ಚೆಯಾದ ವಿಷಯಕ್ಕೆ ಸಂಬಂಧಪಟ್ಟಂತೆ ತಾವೇ ಒಂದು ಹೇಳಿಕೆ ಕೊಡುವಂಥಾದ್ದು ಅದು ಸರಿಯಾದಂಥ ಸಂಪ್ರದಾಯ ಅಲ್ಲ. ಈವರೆಗೆ ಆ ರೀತಿ ಸಂಪ್ರದಾಯ ಇಲ್ಲ.

ಅಧ್ಯಕ್ಷರು :- ಇಲ್ಲಿ ಯಾವುದು ತೆಗೆದುಕೊಳ್ಳಬೇಕು. ಯಾವುದು ತೆಗೆದುಕೊಳ್ಳಬಾರದು ಎಂಬುದನ್ನು ಕೊಡುತ್ತೇವೆ ಅಷ್ಟೆ.

ಶ್ರೀ ಜಗದೀಶ್ ಶೆಟ್ಟರ್ :- ಅಷ್ಟಿದ್ದರೆ ಅಡ್ಡಿಯಿಲ್ಲ.

ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ :- ಅಧ್ಯಕ್ಷರೇ.....

(ಗೊಂದಲ)

ಅಧ್ಯಕ್ಷರು :- ಈಗ ಸದನವನ್ನು 2.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1ಗಂಟೆ 25 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಬೇಕೆಂದು ನಿರ್ಧರಿಸಲಾಯಿತು.

(ಸದನವು ಪುನಃ 3.20ಕ್ಕೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

8. ಅಧ್ಯಕ್ಷರ ತೀರ್ಪು

ಅಧ್ಯಕ್ಷರು :- ಒಂದು ಪ್ರಕಟಣೆ ಇದೆ.

ದಿ: 21.3.03ರಂದು ಬೆಂಗಳೂರು ಸಿಟಿ ಮಾರ್ಕೆಟ್ ಬಳಿ ನಡೆದಂಥ ಘಟನೆ ಕುರಿತು ನಡೆದಂಥ ಚರ್ಚೆಯಲ್ಲಿನ ಕೆಲವು ಪದಗಳನ್ನು ಕಡತದಿಂದ ತೆಗೆದು ಹಾಕಿರುವ ಬಗ್ಗೆ.

ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ರವರು ಇಂದು ಸದನ ಪ್ರಾರಂಭವಾದಾಗ ದಿನಾಂಕ 21.03.2003ರಂದು ಸಿಟಿ ಮಾರುಕಟ್ಟೆ ಪ್ರದೇಶದಲ್ಲಿ ಅಲ್ಪಸಂಖ್ಯಾತರ ವರ್ಗ (ಮುಸ್ಲಿಮ್) ದವರು ಪ್ರತಿಭಟನೆ ನಡೆಸಿ ಜಾರ್ಜ್ ಬುಶ್ ಹಾಗೂ ಅಮೇರಿಕಾ ರಾಷ್ಟ್ರ ಧ್ವಜದ ಭೂತದಹನ ಮಾಡಿದ ಹಿನ್ನೆಲೆಯಲ್ಲಿ ಉಂಟಾಗಿರುವ ಗಲಭೆ ಬಗ್ಗೆ ನಿಲುವಳಿ ಸೂಚನೆ ಪ್ರಸ್ತಾವಕ್ಕೆ ಬಂದಾಗ, ವಿಧಾನ ಸಭಾಧ್ಯಕ್ಷರು ಈ ವಿಷಯವನ್ನು ಪ್ರಶ್ನೋತ್ತರ ವೇಳೆ ನಂತರ ಪ್ರಸ್ತಾಪಿಸಲು ಅವಕಾಶ ನೀಡುವುದಾಗಿ ಹೇಳಿದಂತೆ, ಪ್ರಶ್ನೋತ್ತರ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಎದ್ದಾಗ ನಿಲುವಳಿ ಸೂಚನೆಗೆ ವಿರೋಧ ವ್ಯಕ್ತ ಪಡಿಸಿದಾಗ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಲಾಯಿತು.

ಈ ವಿಷಯ ಪ್ರಸ್ತಾಪಿಸುವ ಸಂದರ್ಭದಲ್ಲಿ ವಿರೋಧ ಪಕ್ಷದವರು ಹಾಗೂ ಸರ್ಕಾರದ ನಡುವೆ, ವಿಷಯದ ಪ್ರಸ್ತಾಪವಾದಾಗ ಗೊಂದಲದ ನಡುವೆ ಕೆಲವು ಅಸಂಸದೀಯ ಪದಗಳನ್ನು ಬಳಸಿರುವ ಹಿನ್ನೆಲೆಯಲ್ಲಿ, ಈ ಮೂಲಕ ಎಲ್ಲಾ ಮಾಧ್ಯಮದವರಿಗೂ ತಿಳಿಸುವುದೇನೆಂದರೆ ಈ ಕೆಳಕಂಡ ಬಳಸಿರುವ ಅಸಂಸದೀಯ ಪದಗಳನ್ನು ಹೊರತುಪಡಿಸಿ ಮಿಕ್ಕ ವಿಚಾರಗಳನ್ನು ಮುದ್ರಿಸಲು ಅನುಮತಿ ನೀಡಲಾಗಿದೆ.

1. "ಬೆಂಕಿ ಹಚ್ಚುವ ಕೆಲಸ"
2. "ಬೆಂಕಿ ಪಾರ್ಟಿ"

ಇಷ್ಟು ಮಾತ್ರ. ಇದರ ಜೊತೆಗೆ ಮಾನ್ಯ ಸದಸ್ಯರಿಗೆ ಆಗಲೀ ಅಥವಾ ಅವರು ಮಾತನಾಡುವ ಹಕ್ಕು ಏನು ಇದೆ. ಅದನ್ನು ಮೊಟಕು ಮಾಡಬೇಕೆಂದು ಹೇಳಿ ನನ್ನ ಮೈಂಡ್‌ನಲ್ಲಿ ಏನೂ ಭಾವನೆ ಇಲ್ಲ. ಮಾಧ್ಯಮ ವರ್ಗದವರಿಗೂ ಅಷ್ಟೇ, ಅವರ ಹಕ್ಕನ್ನು ನಾವು ತೆಗೆಯಬೇಕೆಂದೇನೂ ಇಲ್ಲ. ಇಷ್ಟು ಮಾತ್ರ ಹೇಳಿ ಮಾನ್ಯ ಸದಸ್ಯರಲ್ಲಿ ನನ್ನ ಒಂದು ವಿನಂತಿ ಏನೆಂದರೆ ಈ ವಿಷಯವನ್ನು ಇಲ್ಲಿಗೇ ಸಾಕು ಮಾಡೋಣ. ಬೇರೆ ವಿಷಯ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ತಾವೇನು ಈಗ ತೀರ್ಮಾನವನ್ನು ಕೊಟ್ಟಿದ್ದೀರಿ, ಅದು ಸರಿಯಾದ ತೀರ್ಮಾನ ಆದರೆ ನನ್ನದು ತಮ್ಮಲ್ಲಿ ಒಂದು ಮನವಿ ಏನೆಂದರೆ ಈಗ ಏನಾಗುತ್ತದೆ? ನಮ್ಮಲ್ಲಿ ಇಂಟರ್‌ನೆಟ್ ಇದೆ. ಮತ್ತೆ ಬೇಕಾದಷ್ಟು ಇನ್‌ಫರ್ಮೇಷನ್ ಇಲ್ಲಿ ಚರ್ಚೆ ಆಗುತ್ತಿದ್ದ ಹಾಗೆನೇ ಪತ್ರಕರ್ತರು ಹೊರಗಡೆ ಹೋಗಿ ಸುದ್ದಿಗಳನ್ನು ಟೆಲಿಫೋನ್ ಮುಖಾಂತರ ಮತ್ತೊಂದು ಕಳುಹಿಸುತ್ತಿರುತ್ತಾರೆ. ಈಗ ನಾವು ಇಡೀ ಚರ್ಚ್‌ಯನ್ನೇ, ಯಾವುದಾದರೂ ಒಂದು ಶಬ್ದ ತಮಗೆ ಗೊತ್ತಿರುವ ಹಾಗೆ, ಒಂದು ಶಬ್ದವನ್ನು ಅಥವಾ ಎರಡು ಶಬ್ದವನ್ನು ತೆಗೆದು ಹಾಕಿಸತಕ್ಕದ್ದಕ್ಕೆ ತಕ್ಷಣ ತಾವು ತೀರ್ಮಾನ ತೆಗೆದುಕೊಂಡರೆ ಅದನ್ನು ತೆಗೆದು ಹಾಕಲು ಅನುಕೂಲ ಆಗುತ್ತದೆ.

ಅಧ್ಯಕ್ಷರು :- ಗೊಂದಲ ಆಯಿತು, ಅದಕ್ಕೋಸ್ಕರ ತೀರ್ಮಾನ ತೆಗೆದುಕೊಳ್ಳಲು ಆಗಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ ತಾವು ಒಂದು ನಿರ್ಣಯವನ್ನು ಕೊಟ್ಟು ಒಳ್ಳೆಯದು ಮಾಡಿದ್ದೀರಿ. ಆದರೆ ಇಡೀ ಪ್ರೊಸೀಡಿಂಗ್ಸ್‌ನ್ನೇ ಮಾಡಿದಾಗ ನಿಮಗೇ ತೊಂದರೆ ಆಗುತ್ತದೆ.

ಅಧ್ಯಕ್ಷರು :- ಆ ಎಪಿಸೋಡ್ ಎಂದು ಹೇಳಿದ್ದೆ. ಅದನ್ನು ವಾಪಸ್ ತೆಗೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮೀಡಿಯಾದವರು ಬರತಕ್ಕದ್ದು ರಿಪೋರ್ಟ್ ಮಾಡಲಿಕ್ಕೆ ಅವರು ಇಲ್ಲಿ ನಡೆಯತಕ್ಕ ಡಿಬೇಟ್ಸ್‌ನ್ನು ಪ್ರಕಟಿಸುವ ಬಗ್ಗೆ ನಾನು ಅಡ್ಡಿ ಹಾಕುವುದಕ್ಕೆ ಆಗುವುದಿಲ್ಲ. ಮಾನ್ಯ ಖರ್ಗೆಯವರಿಗೆ ಚೆನ್ನಾಗಿ ಗೊತ್ತಿದೆ. ಮಾನ್ಯ ಕೃಷ್ಣ ಅವರು ಈ ಸದನದಲ್ಲಿ ಇರಲಿಲ್ಲ. ಮಾನ್ಯ ಖರ್ಗೆಯವರು ಈ ಕಡೆ ಕುಳಿತುಕೊಳ್ಳುತ್ತಿದ್ದರು. ಶ್ರೀಮಾನ್ ಜೆ.ಎಚ್. ಪಟೇಲ್ ಅವರು ಮಾತನಾಡುತ್ತಿದ್ದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅವರು ಆ ಪದವನ್ನು ತೆಗೆದು ಹಾಕಿದ್ದಾರೆ ತೆಗೆದು ಹಾಕಿದ್ದೀರಿ. ತಮ್ಮ ತೀರ್ಮಾನ ಅಂತಿಮ ತೀರ್ಮಾನ. ನಾವೆಲ್ಲರೂ ನೀವು ಕೊಟ್ಟಂತಹ

ತೀರ್ಮಾನಕ್ಕೆ ತಲೆ ಬಾಗಲೇಬೇಕು. ಆದರೆ ಎನ್ನತಕ್ಕ ಮಾತು ಅನ್‌ಪಾರ್ಲಿಮೆಂಟರಿ ಆಗುವುದಿಲ್ಲ. ಏನೂ ಆಗುವುದಿಲ್ಲ. ಈ ಹಿಂದೆ ಈ ಸದನದಲ್ಲಿ ಮಾನ್ಯ ಸಿಂಧ್ಯಾ ಸಾಹೇಬರು ಇದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಜೆ.ಎಚ್. ಪಟೇಲ್ ಅವರು ಭಾಷಣ ಮಾಡುವಾಗ ಮಾನ್ಯ ಖರ್ಗೆಯವರು ಈ ಕಡೆ ಕುಳಿತುಕೊಳ್ಳುತ್ತಿದ್ದರು. ಕಾಂಗ್ರೆಸ್‌ಗೆ ಸೀಮೆಎಣ್ಣೆ ಪಾರ್ಟಿ ಬಿಜೆಪಿಗೆ ಬೆಂಕಿ ಪಟ್ಟಣದ ಪಾರ್ಟಿ ಎಂದು ಬೇಕಾದಷ್ಟು ಸಲ ಈ ಸದನದಲ್ಲಿ ಹೇಳಿದ್ದಾರೆ. ಅವರು ಸ್ವಲ್ಪ ಹಾಸ್ಯಮಯವಾಗಿ ಹೇಳುತ್ತಿದ್ದರಿಂದಾಗಿ ಸ್ವಲ್ಪ ಹಾಸ್ಯ ಇದ್ದುದರಿಂದ ಇವರೂ ಸೀರಿಯಸ್ ಆಗಿ ತೆಗೆದುಕೊಳ್ಳುತ್ತಿರಲಿಲ್ಲ. ಅದಕ್ಕೆ ಇವರೂ ಇನ್ನೊಂದು ರೀತಿ ಹೇಳುತ್ತಿದ್ದರು, ಅದು ನಡೆದು ಹೋಗಿ ಬಿಡುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅದು ಸಂಪೂರ್ಣ ಸುಟ್ಟುಕೊಂಡು ಸಾಯುವ ಪಾರ್ಟಿ ಎಂದು ಹೇಳುತ್ತಿದ್ದೇವೆ. ಅದರ ಬಗ್ಗೆ ಸೀರಿಯಸ್ ಇರಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ಒಪ್ಪಿಕೊಳ್ಳೋಣ. ವಿಷಯಮುಕ್ತಾಯಗೊಳ್ಳಲಿ. ಆದರೆ ಒಂದು ತಾಸು ಗೊಂದಲ ನಿರ್ಮಾಣ ಆಯಿತು. ನಮ್ಮ ಪತ್ರಿಕಾ ಮಿತ್ರರು ಏನು ಮಾಡಬೇಕು ಎಂದು ಶೂನ್ಯದಲ್ಲಿ ಬಂತು ಈ ರೀತಿ ಆಗಬಾರದು.

ಅಧ್ಯಕ್ಷರು :- ಇನ್ನೂ ಮುಂದೆ ಎಲ್ಲವನ್ನೂ ಸರಿಪಡಿಸಿಕೊಳ್ಳೋಣ.

ಅಧ್ಯಕ್ಷರು :- ಅದನ್ನು ಸರಿಪಡಿಸಿಕೊಳ್ಳೋಣ.

ಶ್ರೀ ಜಗದೀಶ್‌ಶೆಟ್ಟರ್ :- ಆ ಮೇಲೆ ವಿಧಾನ ಪರಿಷತ್ತಿನಲ್ಲಿ ಎಲ್ಲಾ ವಿಷಯದ ಬಗ್ಗೆ ಚರ್ಚೆ ಆಗಿದೆ.

ಅಧ್ಯಕ್ಷರು :- ಇನ್ನು ಮುಂದೆ ಎಲ್ಲವನ್ನೂ ಸರಿಪಡಿಸಿಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ :- ಇಮ್ಮೀಡಿಯೇಟ್ ಆಗಿ ರಿಪೋರ್ಟಿಂಗ್ ಮಾಡಬೇಕು. ಒಂದು ಶಬ್ದದ ಸಲುವಾಗಿ ನಾವು ಸದನ ಮುಂದೆ ಹಾಕಿದ್ದೇನೆ.

ಅಧ್ಯಕ್ಷರು :- ಅದನ್ನೆಲ್ಲಾ ಸರಿ ಪಡಿಸಿಕೊಳ್ಳೋಣ ಎಂದು ಹೇಳಿದೆನಲ್ಲಾ. ದಯವಿಟ್ಟು ಈ ವಿಷಯ ಇಲ್ಲಿಗೆ ಸಾಕು ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ :- ಮತ್ತೆ ಇದೇ ವಿಷಯದ ಬಗ್ಗೆ ವಿಧಾನಪರಿಷತ್ತಿನಲ್ಲಿ ತಾಸುಗಟ್ಟಲೆ ಚರ್ಚೆ ಆಗಿದೆ.

Mr. Speaker :- Let use not comment about the Upper House.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇಲ್ಲಿ ಸದನದಲ್ಲಿ ಅನ್‌ಪಾರ್ಲಿಮೆಂಟರಿ ಎಂದು ಆಗಿಲ್ಲ. ಈಗ ಬೆಂಕಿ ಹಚ್ಚುವ ಕೆಲಸ ಮಾಡಬೇಡಿ ಎಂದರೆ ಅದನ್ನು ತಾವು ತೆಗೆಯುತ್ತೇವೆ ಎಂದರೆ ತೆಗೆದುಬಿಡಿ. ನಮ್ಮದೇನೂ ಅಭ್ಯಂತರ ಇಲ್ಲ. ಅವರ ಬಗ್ಗೆ ಎಕ್ಸ್‌ಪ್ರೆಷನ್ಸ್ ಏನೂ ಇಲ್ಲ ಆದರೆ ಇದ್ದರೆ ಒಳ್ಳೆಯದಿತ್ತು.

ಅಧ್ಯಕ್ಷರು :- ಆಯಿತು ಬಿಡಿ. ಮಾನ್ಯ ಜ್ಞಾನೇಂದ್ರ ಅವರು ಪ್ರಾರಂಭ ಮಾಡಿ. ಮಾನ್ಯ ಜ್ಞಾನೇಂದ್ರ ಅವರು ಬಜೆಟ್ ಮೇಲೆ ಪ್ರಾರಂಭ ಮಾಡುತ್ತಾರೆ.

9. ವಿತ್ತೀಯ ಕಾರ್ಯಕಲಾಪ

ವಿಷಯ: 2003-04ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಚರ್ಚೆ

+ ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :- ಮಾನ್ಯ ಅಧ್ಯಕ್ಷರೆ, 2003-04ನೇ ಸಾಲಿನ ಸರ್ಕಾರದ ಆಯವ್ಯಯದ ಬಗ್ಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.